**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂವೈಎಸ್/8179/2022/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು
ದಿನಾಂಕ: 18.04.2023.

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ**

ವಿಷಯ: ಕಟಪಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೂಡಬೆಟ್ಟು ಗ್ರಾಮದ ಸರಹದ್ದಿಯಲ್ಲಿ ನಿವೇಶನ ಸಂ:84/3ಎ1ಎ, ಸರ್ಕಾರಿ ನಿವೇಶನವಾಗಿದ್ದು, ಸದರಿ ಸರ್ಕಾರಿ ಸ್ವತ್ತಿನಲ್ಲಿ ಜಿಲ್ಲಾ ಮುಖ್ಯ ರಸ್ತೆ ಹಾದು ಹೋಗಿದ್ದು, ರಸ್ತೆಯ ಮಾರ್ಜಿನ್‌ಗೆ ಸೇರಿರುವ ಜಾಗದಲ್ಲಿ ಫೆಡ್ರಿಕ್ ಥಾಮಸ್ ನರೋನ್ಹಾ ರವರು ಕಂಪೌಂಡ್ ಗೋಡೆ ನಿರ್ಮಾಣ ಮಾಡಿದ್ದು, ಸಿವಿಲ್ ವ್ಯಾಜ್ಯಕ್ಕೆ ಕಾರಣವಾಗುವುದರಿಂದ, ಸರ್ಕಾರಿ ಸ್ವತ್ತನ್ನು ಉಳಿಸಿಕೊಳ್ಳಲು ಸದರಿ ಕಂಪೌಂಡ್ ಗೋಡೆಯನ್ನು ತೆರವುಗೊಳಿಸಿ, ಸರ್ಕಾರಿ ಸ್ವತ್ತನ್ನು ಸ್ವಾಧೀನಕ್ಕೆ ಪಡೆದು, ಸಂರಕ್ಷಿಸಲು ಕ್ರಮ ಜರುಗಿಸುವ ಕುರಿತು ಶಿಫಾರಸು ವರದಿ.

*****

1) ಶ್ರೀಮತಿ. ಶ್ರೀಮತಿ. ಮರ್ಲಿನ್ ನರೋನ್ಹಾ ಕೋಂ ಜೆರೋಮ್ ನರೋನ್ಹಾ, ಫ್ಲಾಟ್ ನಂ:101, ವಿಶ್ವಾಸ ಜಾಸ್ಮಿನ್ ಅಪಾರ್ಟಮೆಂಟ್, ಮಂಗಳೂರು, ದ.ಕ.ಜಿಲ್ಲೆ, (ಇನ್ನು ಮುಂದೆ ದೂರುದಾರರೆಂದು ಕರೆಯಲ್ಪಡುತ್ತಾರೆ) ಇವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಉಡುಪಿ ಜಿಲ್ಲೆ (ಇನ್ನು ಮುಂದೆ ಎದುರುದಾರರೆಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿರುತ್ತಾರೆ.

**2) ದೂರಿನ ಸಾರಾಂಶ:-**

ದೂರುದಾರರು ತಮ್ಮ ದೂರಿನಲ್ಲಿ, ತಾನು ಶಂಕರಪುರ-ಮೂಡಬೆಟ್ಟು ಗ್ರಾಮದ ಸರಹದ್ದಿನಲ್ಲಿ ಸ.ನಂ.84/3ಎ2ಬಿ ನಿವೇಶನ ಹೊಂದಿದ್ದು, ಸದರಿ ನಿವೇಶನವು ಸ.ನಂ.84/3ಎ1ಎ ಲೋಕೋಪಯೋಗಿ ಇಲಾಖೆಗೆ ಸೇರಿದ ನಿವೇಶನಕ್ಕೆ ಹೊಂದಿಕೊಂಡಿರುತ್ತದೆ. ಸದರಿ ಲೋಕೋಪಯೋಗಿ ಇಲಾಖೆಯವರು ಅನಧಿಕೃತವಾಗಿ ಆವರಣ ಗೋಡೆಯನ್ನು ತನ್ನ ನಿವೇಶನಕ್ಕೆ ಹೊಂದಿಕೊಂಡು ನಿರ್ಮಾಣ ಮಾಡಿದ್ದು, ಅದರಿಂದ, ತನ್ನ ಖಾಲಿ ನಿವೇಶನಕ್ಕೆ ಹೋಗಿ ಬರಲು ಅಸಾಧ್ಯವಾಗಿರುತ್ತದೆ. ಈ ಕುರಿತು ಸಿ.ಇ.ಓ., ಜಿ.ಪಂ., ಮತ್ತು ಪಿ.ಡಿ.ಓ., ಕಟಪಾಡಿ ಗ್ರಾಮ ಪಂಚಾಯತಿ ಹಾಗೂ ಕಾಪು ಪೋಲೀಸ್ ಠಾಣೆಗೆ ಕಾಂಪೌಂಡ್ ನಿರ್ಮಾಣ ಮಾಡಿದ ಸಂಬಂಧ ಫೆಡ್ರಿಕ್ ಥೋಮಸ್ ನರೋನ್ಹಾ ರವರ ವಿರುದ್ಧ ದೂರು ನೀಡಿದ್ದು, ಸದರಿಯವರು ತಪ್ಪು ಮಾಹಿತಿಯನ್ನು ನೀಡಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿರುವುದಾಗಿ ತಿಳಿಸಿರುತ್ತಾರೆ.

3) ನ್ಯಾಯಾಲಯದಲ್ಲಿ ಯಾವುದೇ ಪ್ರಕರಣ ದಾಖಲಿರುವುದಿಲ್ಲ. ಸದರಿ ಕಾಂಪೌಂಡ್ ವಾಲನ್ನು ತೆರವುಗೊಳಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1ನೇ ಉಪವಿಭಾಗ, ಉಡುಪಿ ರವರು ಕಾಂಪೌಂಡ್ ಗೋಡೆಯನ್ನು ತೆರವುಗೊಳಿಸುವಂತೆ ಸೂಚಿಸಿದ್ದು, ಆದರೆ, ಇಲ್ಲಿಯವರೆಗೆ ಕಾಂಪೌಂಡ್ ಗೋಡೆಯನ್ನು ತೆರವುಗೊಳಿಸಿರುವುದಿಲ್ಲ. ಎದುರುದಾರರು ಸಹಾ ಕಾಂಪೌಂಡ್ ಗೋಡೆಯನ್ನು ತೆರವುಗೊಳಿಸಲು ನಿರ್ಲಕ್ಷ ವಹಿಸಿರುವುದರಿಂದ, ಸದರಿ ಕಾಂಪೌಂಡ್ ಗೋಡೆಯನ್ನು

ತೆರವುಗೊಳಿಸಲು ನಿರ್ದೇಶನ ನೀಡಬೇಕೆಂದು ಕೋರಿ ದೂರು ಸಲ್ಲಿಸಿರುತ್ತಾರೆ.

4) **ಎದುರುದಾರರಿಂದ ದಿನಾಂಕ: 23.01.2023 ರಂದು ಆಕ್ಷೇಪಣೆ ಸ್ವೀಕರಿಸಿದ್ದು,** ಪರಿಶೀಲಿಸಲಾಗಿ, ಕಟಪಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೂಡಬೆಟ್ಟು ಗ್ರಾಮದ ಸ.ನಂ. 84/3ಎ2ಬಿ ಮರ್ಲಿನ್ ನರೊನ್ಹಾರವರ ಜಾಗ, ಸ.ನಂ. 84/3ಎ2ಎ ಫೆಡ್ರಿಕ್ ಥೋಮಸ್ ನರೊನ್ಹಾರ ಜಾಗ ಹಾಗೂ ಸ.ನಂ. 84/3ಎ1ಎ ಸರ್ಕಾರಿ ಜಾಗವಾಗಿರುತ್ತದೆ.

5) ವಿವಾದಿತ ಸ್ಥಳದ ಪಕ್ಕದಲ್ಲಿರುವ ಕಟಪಾಡಿ-ಶಿರ್ವಾ ರಸ್ತೆಯು ಈ ಮೊದಲು ಲೋಕೋಪಯೋಗಿ ಇಲಾಖೆಗೆ ಸೇರಿದ ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ನಿಯಮಾವಳಿಯಂತೆ ರಸ್ತೆಯ ಮಧ್ಯ ರೇಖೆಯಿಂದ 25 ಮೀಟರ್‌ಗಳ ಅಂತರ ಬಿಟ್ಟು, ಯಾವುದೇ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದು, ಸಂಬಂಧಿಸಿದ ಗ್ರಾಮ ಪಂಚಾಯಿತಿಯಿಂದ ಕಟ್ಟಡ ಪರವಾನಿಗೆ ಪಡೆದು, ಕಾಮಗಾರಿ ಕೈಗೊಳ್ಳಬೇಕಾಗಿರುತ್ತದೆ. ಆದರೆ ವಿವಾದಿತ ಆವರಣ ಗೋಡೆಯನ್ನು ಶ್ರೀ ಫೆಡ್ರಿಕ್ ಥೋಮಸ್ ನರನ್ಹಾ ರವರು ಸುಮಾರು 10 ವರ್ಷಗಳ ಹಿಂದೆ ಕಟಪಾಡಿ ಗ್ರಾಮ ಪಂಚಾಯಿತಿಯಿಂದ ಅನುಮತಿ ಪಡೆದು ನಿರ್ಮಿಸಿರುವು ದಾಗಿ ದಿ: 11.09.2019 ರ ಪತ್ರದಲ್ಲಿ ತಿಳಿಸಿದ್ದು, ಸರಿಸುಮಾರು 13 ವರ್ಷ ಗಳ ಹಿಂದೆ ನಿರ್ಮಿಸಿರುವುದು ಸ್ಥಳ ಪರಿಶೀಲನೆಯಿಂದ ತಿಳಿದುಬರುತ್ತದೆ. ಸ್ಥಳದಲ್ಲಿ ಅಕ್ಕ-ಪಕ್ಕದಲ್ಲಿಯೂ ಆವರಣ ಗೋಡೆಯನ್ನು ಒಂದೇ ಸಾಲಿನಲ್ಲಿ ನಿರ್ಮಿಸಿದ್ದು, ರಸ್ತೆಯ

ಮಧ್ಯ ಭಾಗದಿಂದ ಸರಾ ಸರಿ 18 ಮೀಟರ್ ದೂರದಲ್ಲಿ ಆವರಣ ಗೋಡೆ ನಿರ್ಮಿಸಲಾಗಿರುತ್ತದೆ.

6) ಕಟಪಾಡಿ ಜಿಲ್ಲಾ ಮುಖ್ಯ ರಸ್ತೆಯನ್ನು ಪ್ರಸ್ತುತ ರಾಜ್ಯ ಹೆದ್ದಾರಿಯಾಗಿ ದಿ: 01.09.2020 ರ ಸರ್ಕಾರಿ ಆದೇಶದನ್ವಯ ಮೇಲ್ದರ್ಜೆಗೇರಿಸ ಲಾಗಿದೆ. ಸರ್ಕಾರದ ನಿರ್ದೇಶನದಂತೆ ವಿವರವಾದ ಸರ್ವೇ ಕೈಗೊಂಡು, ರಸ್ತೆಯ ದಾಖಲಾತಿ ಭೂ ಗಡಿ ರೇಖೆಯನ್ನು ನಿರ್ಧರಿಸಬೇಕಾಗಿದ್ದು, ಪ್ರಕ್ರಿಯೆ ಇನ್ನೂ ಪ್ರಾರಂಭದ ಹಂತದಲ್ಲಿರುತ್ತದೆ. ಕಟಪಾಡಿ-ಶಿರ್ವಾ-ನಂದಿಕೂರು ರಸ್ತೆ ಯನ್ನು ವಿವಾದಿತ ಸ್ಥಳದಲ್ಲಿ ಈಗಾಗಲೇ ದ್ವಿ-ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲಾಗಿದ್ದು, ಖಾಲಿ ರಸ್ತೆಯನ್ನು ವಿಸ್ತರಿಸುವ ಯಾವುದೇ ಕಾಮಗಾರಿ ಮಂಜೂರಾತಿ ಯಾಗಿರುವುದಿಲ್ಲ.

7) ವಿವಾದಿತ ಸ್ಥಳದಲ್ಲಿ ರಸ್ತೆಯ ವಿಸ್ತರಣೆ ಸಂದರ್ಭದಲ್ಲಿ ಸಾರ್ವಜನಿಕ ಹಿತಾಸಕ್ತಿಗೆ ಯಾವುದೆ ತೊಂದರೆಯಾಗದಂತೆ ಆವರಣ ಗೋಡೆಯನ್ನು ಸ್ವ ಇಚ್ಛೆಯಿಂದ ತೆರವುಗೊಳಿಸಿಕೊಡಲು ಫೆಡ್ರಿಕ್ ಥೋಮಸ್ ನರನ್ಹಾ ರವರು ಲಿಖಿತವಾಗಿ ಪತ್ರ ನೀಡಿರುವುದರಿಂದ ದೂರುದಾರರು ಅವರ ಸಹೋದರ ಸಂಬಂಧಿಯಾಗಿದ್ದು, ಅವರ ಪತ್ನಿ ಮರ್ಲಿನಾ ನರೊನ್ಹಾ ರವರ ಜಾಗಕ್ಕೆ ಅವರದೇ ಜಾಗದಿಂದ ಹೋಗಲು ಅವಕಾಶವಿದ್ದು, ಆದಾಗ್ಯೂ ಫೆಡ್ರಿಕ್ ಥೋಮಸ್ ನರನ್ಹಾ ರವರ ಆವರಣ ಗೋಡೆ ತೆರವುಗೊಳಿಸಲು ಒತ್ತಾಯಿಸಿರುತ್ತಾರೆ. ಆವರಣ ಗೋಡೆ ತೆರವುಗೊಳಿಸಿದರೂ ಸಹ ಮರ್ಲಿನ ನರೊನ್ಹಾ ರವರ ಜಾಗಕ್ಕೆ ಹೋಗಲು ಅವಕಾಶವಿರುವುದಿಲ್ಲ.

8) ಐ.ಆರ್.ಸಿ. ಶಿಫಾರಸು ಮಾಡಿದಂತೆ ರಾಜ್ಯ ಹೆದ್ದಾರಿ ರಸ್ತೆ ಬದಿ ಕಟ್ಟಡ ನಿರ್ಮಾಣ ಪ್ರದೇಶದಲ್ಲಿ ರಸ್ತೆಗಾಗಿ ಶಿಫಾರಸು ಮಾಡಲಾದ 30 ಮೀಟರ ಎಂದರೆ ರಸ್ತೆ ಮಧ್ಯ ಭಾಗದಿಂದ 15 ಮೀಟರ ರಸ್ತೆ ಎರಡು ಬದಿ ಕಾಯ್ದಿರಿಸಬೇಕಾಗುತ್ತದೆ. ಆವರಣ ಗೋಡೆಯು ಸರಾ ಸರಿ ರಸ್ತೆ ಮಧ್ಯ ಭಾಗದಿಂದ 18 ಮೀಟರ್ ಅಂತರದಲ್ಲಿರುವುದರಿಂದ ಸಾರ್ವಜನಿಕ ಸಂಚಾರಕ್ಕೆ ಯಾವುದೆ ಅಡೆ-ತಡೆ ಉಂಟಾಗಿರುವುದಿಲ್ಲ. ಆವರಣ ಗೋಡೆಯನ್ನು ಸರ್ಕಾರಿ ಜಾಗದಲ್ಲಿ ನಿರ್ಮಿಸಲಾಗಿದೆಯೇ ಅಥವಾ ಖಾಸಗಿಯವರ ಪಟ್ಟಾ ಜಾಗದಲ್ಲಿದೆಯೇ ಎಂದು ಸರ್ವೇ ಕೈಗೊಂಡು, ಗಡಿ ರೇಖೆ ಗುರ್ತಿಸಿದ ನಂತರವೇ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಗಡಿ ಗುರುತು ಮಾಡಿ ನೀಡಲು ಭೂ ದಾಖಲೆ ಇಲಾಖೆಯವರಿಗೆ ಪತ್ರ ಬರೆಯ ಲಾಗಿರುತ್ತದೆ. ಆವರಣ ಗೋಡೆ ಅನಧಿಕೃತವಾಗಿರುವಲ್ಲಿ ತೆರವುಗೊಳಿಸುವ ಬಗ್ಗೆ ಕಾನೂನಿನ್ವಯ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಆಕ್ಷೇಪಣೆ ಯನ್ನು ಸಲ್ಲಿಸಿರುತ್ತಾರೆ.

**9) ಸದರಿ ಪ್ರಕರಣದಲ್ಲಿ ದೂರುದಾರರಿಂದ ದಿನಾಂಕ: 21.03.2023 ರ ಪ್ರತ್ಯುತ್ತರ ಸ್ವೀಕರಿಸಿದ್ದು,** ಪರಿಶೀಲಿಸಲಾಗಿ, ಲೋಕೋಪಯೋಗಿ ಇಲಾಖೆಯ ಸಹಾಯಕ ಇಂಜಿನೀಯರ್ ನೀಡಿರುವ ಆಕ್ಷೇಪಣೆಯನ್ನು ಒಪ್ಪಲು ಬರುವುದಿಲ್ಲ. ದಿ: 31.08.2019 ರಂದು ಫೆಡ್ರಿಕ್ ಥಾಮಸ್ ನರ್ರೋಣಾ, ರವರಿಗೆ ಸರ್ಕಾರಿ ಆಸ್ತಿಯ ಮೇಲೆ ಕಟ್ಟಿರುವ ಕಂಪೌಂಡ್ ಗೋಡೆಯನ್ನು ತೆರವುಗೊಳಿಸುವಂತೆ ಸೂಚಿಸಲಾಗಿದ್ದು, ಅದರಂತೆ ಸದರಿಯವರು ದಿ: 11.09.2019 ರಂದು ಕಂಪೌಂಡ್ ತೆರವುಗೊಳಿಸುವುದಾಗಿ ಲಿಖಿತವಾಗಿ ಸದರಿಯವರು ಸಲ್ಲಿಸಿರುತ್ತಾರೆ.

10) ಪ್ರಸ್ತುತ ಸದರಿ ಕಂಪೌಂಡ್‌ನ್ನು ತೆರವುಗೊಳಿಸಿರುವುದಿಲ್ಲ. ತನ್ನ ನಿವೇಶನದ ಜಾಗವು ಸದರಿ ಸರ್ಕಾರಿ ಜಾಗಕ್ಕೆ ಹೊಂದಿಕೊಂಡಿದ್ದು, ಕಂಪೌಂಡ್ ವಾಲ್ ನಿರ್ಮಾಣದಿಂದ ತನಗೆ ಓಡಾಡಲು ತೊಂದರೆಯಾಗುತ್ತಿದ್ದು, ಓಡಾಡಲು ಬೇರೆ ಜಾಗ ಇರುವುದಾಗಿ ನಮೂದಿಸಲಾಗಿದ್ದು, ರವೀಂದ್ರ ಶೆಟ್ಟಿ, ಇವರ ನಿವೇಶನವು ತನ್ನ ನಿವೇಶನ ದೊಂದಿಗೆ ಹೊಂದಿಕೊಂಡಿದ್ದು, ರವೀಂದ್ರ ಶೆಟ್ಟಿಯವರ ನಿವೇಶನ ತನಗೆ ಮಾರಾಟ ಮಾಡಲು ಕರಾರು ಆಗಿರುತ್ತದೆಂದು ತಿಳಿಸಿದ್ದು, ರವೀಂದ್ರ ಶೆಟ್ಟಿಯವರು ಕಂಪೌಂಡ್ ನಿರ್ಮಾಣ ಮಾಡಿದ್ದಲ್ಲಿ ತನಗೆ ಓಡಾಡಲು ಜಾಗ ವಿರುವುದಿಲ್ಲವೆಂದು ಆದ್ದರಿಂದ ಸದರಿ ಕಂಪೌಂಡ್‌ನ್ನು ತೆರವುಗೊಳಿಸಬೆಕೆಂದು ಕೋರಿರುತ್ತಾರೆ.

11) ಈ ಮೇಲ್ಕಾಣಿಸಿದ ಅಂಶಗಳನ್ವಯ ಎದುರುದಾರರಿಗೆ ಸೇರಿರುವ ಸರ್ಕಾರಿ ಜಾಗಕ್ಕೆ ಹೊಂದಿಕೊಂಡಂತೆ ಫೆಡ್ರಿಕ್ ಥಾಮಸ್ ನರ್‍ಹೋನಾ, ಇವರು ರಸ್ತೆಗೆ ಹೊಂದಿ ಕೊಂಡಂತೆ ಕಂಪೌಂಡ್ ನಿರ್ಮಾಣ ಮಾಡಿರುವುದು ಇದರಿಂದ ದೂರು ದಾರರಿಗೆ ಮುಂದೆ ತೊಂದರೆಯಾಗುವುದಾಗಿ, ಆಪಾದಿಸಿ ಕಂಪೌಂಡ್ ತೆರವಿಗೆ ನಿರ್ದೇಶನ ನೀಡಬೇಕೆಂದು ಕೋರಿರುತ್ತಾರೆ.

12) ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ಸದರಿ ನಿವೇಶನದಲ್ಲಿ ಬೇರೆಯವರು ಕಂಪೌಂಡ್ ನಿರ್ಮಾಣ ಮಾಡಿರುವಲ್ಲಿ ಅತಿಕ್ರಮಣಕ್ಕೆ ಆಸ್ಪದ ನೀಡಿದಂತೆ ಆಗುತ್ತದೆ. ಆದ್ದರಿಂದ, ಸರ್ಕಾರಿ ಸ್ವತ್ತನ್ನು ಉಳಿಸಿಕೊಳ್ಳಲು ಸಾಧ್ಯವಾಗದೇ ಅನಾವಶ್ಯಕವಾಗಿ ಸಿವಿಲ್

ವ್ಯಾಜ್ಯಕ್ಕೆ ದಾರಿ ಮಾಡಿಕೊಡು ವುದರಿಂದ, ಎದುರುದಾರರಿಗೆ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ಸಂಪೂರ್ಣ ಸ್ವತ್ತನ್ನು ತಮ್ಮ ಸ್ವಾಧೀನಕ್ಕೆ ಪಡೆದು, ಸದರಿ ಸ್ವತ್ತನ್ನು ರಕ್ಷಿಸಲು ಸೂಕ್ತ ಕ್ರಮ ವಹಿಸಬೇಕಾಗಿರುತ್ತದೆ. ಆದರೆ ಫೆಡ್ರಿಕ್ ಥಾಮಸ್ ನರ್ಝೋನಾ, ರವರು 10 ವರ್ಷಗಳ ಹಿಂದೆ ಆವರಣ ಗೋಡೆ ನಿರ್ಮಾಣ ಮಾಡಿರುತ್ತಾರೆಂದು ರಸ್ತೆಯ ಪರಿವಿಧಿಯಲ್ಲಿ ಬರುವುದಿಲ್ಲವೆಂದು ತಿಳಿಸಿದ್ದು, ನಿವೇಶನ ಸಂ: 84/3ಎ1ಎ ಲೋಕೋಪಯೋಗಿ ಇಲಾಖೆಗೆ ಸೇರಿದ ಸ್ವತ್ತಾಗಿರುವುದಿರಂದ, ಸದರಿ ಸ್ವತ್ತನ್ನು ರಕ್ಷಿಸಿ, ಕಂಪೌಂಡ್ ಗೋಡೆ ಯನ್ನು ತೆರವುಗೊಳಿಸಲು ಕಾನೂನಾತ್ಮಕ ಕ್ರಮ ಜರುಗಿಸಿ, ಸ್ವತ್ತನ್ನು ವಶಕ್ಕೆ ಪಡೆದು, ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಸೂಚಿಸಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ. 12(1) ರಡಿಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗಿದೆ.

13) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರ ಪ್ರಕಾರ, ಸಕ್ಷಮ ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ <u>ಒಂದು ತಿಂಗಳೊಳಗಾಗಿ</u> ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

18/4/23

[ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.